**ಕರ್ನಾಟಕ ಲೋಕಸೇವಾ ಆಯೋಗ**

**"ಉದ್ಯೋಗ ಸೌಧ" ಬೆಂಗಳೂರು-560 001.**

**ಸಂಖ್ಯೆ: ಪಿಎಸ್ ಸಿ/ 2417 /ಇ(1) /2024-25** **ದಿನಾಂಕ:01-01-2025**

**ತಿದ್ದುಪಡಿ ಅಧಿಸೂಚನೆ**

**ಉಲ್ಲೇಖ:** ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ 1709/ಇ(1)/2024-25, ದಿ:19-11-2024.

* * * * *

ಆಯೋಗವು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು ಗ್ರೂಪ್ - ಎ ವೃಂದದ 15 (ಹೈ.ಕ.) ಹುದ್ದೆಗಳಿಗೆ ಮೇಲ್ಕಂಡ ಉಲ್ಲೇಖಿತ ಅಧಿಸೂಚನೆಯನ್ವಯ ಮುಖ್ಯ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಪ್ರಸ್ತುತ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯಪರೀಕ್ಷೆಗೆ ಅರ್ಹರಾದ ಕೆಲವು ಅಭ್ಯರ್ಥಿಗಳು ತಾಂತ್ರಿಕ ಸಮಸ್ಯೆಯಿಂದಾಗಿ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದ ಕಾರಣ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ ಆಯೋಗವು ಸದರಿ ಹುದ್ದೆಗಳ ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ:02-01-2025 ರಿಂದ 04-01-2025 ರವರೆಗೆ ದಿನಾಂಕವನ್ನು ವಿಸ್ತರಿಸಲು ನಿರ್ಣಯಿಸಿರುತ್ತದೆ. ಅದರಂತೆ ಅರ್ಜಿ ಸಲ್ಲಿಸದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಮುಂದುವರೆದು, ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 1709/ಇ(1)/2024-25, ದಿನಾಂಕ:19-11-2024ರಲ್ಲಿ ತಿಳಿಸಲಾಗಿರುವ ಮಾಹಿತಿ/ವಿವರಗಳನ್ನು ಯಥಾವತ್ತಾಗಿ ಅನ್ವಯಿಸಿಕೊಳ್ಳತಕ್ಕದ್ದು ಹಾಗೂ ಹೆಚ್ಚಿನ ವಿವರಗಳಿಗಾಗಿ ಸದರಿ ಅಧಿಸೂಚನೆಯನ್ನು ಓದಿಕೊಳ್ಳತಕ್ಕದ್ದು.

…2

<u>ಸೂಚನೆ</u>:-

1. ಅಭ್ಯರ್ಥಿಗಳು<u>"ಕೆ.ಪಿ.ಎಸ್.ಸಿ. ಉದ್ಯೋಗ"</u> ಸಾಫ್ಟ್‌ವೇರ್ ನಲ್ಲಿ **(https://kpsconline.karnataka.gov.in)** ಅರ್ಜಿ ಸಲ್ಲಿಸಬಹುದು.
2. ಅಭ್ಯರ್ಥಿಗಳು ಅಧಿಸೂಚನೆಗೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ನಂತರ QR Code ಇರುವ ಈ ಕೆಳಕಂಡ ಅಂಶಗಳನ್ನು ಒಳಗೊಂಡ ಸ್ವೀಕೃತಿ ನೀಡಲಾಗುವುದು.
   - Application submitted
   - Payment done
   - Application is accepted

   ಮೇಲ್ಕಂಡ ಅಂಶಗಳನ್ನೊಳಗೊಂಡ ಸ್ವೀಕೃತಿಯನ್ನು ಪಡೆದ ನಂತರವೇ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಅರ್ಥೈಸಿಕೊಳ್ಳುವುದು.
3. ಸ್ವೀಕೃತವಾದ ಅರ್ಜಿಯ ಪ್ರಿವ್ಯೂನಲ್ಲಿನ QR Code ಅನ್ನು scan ಮಾಡಿದಲ್ಲಿ ಅಭ್ಯರ್ಥಿಯ ಹೆಸರು, ಅರ್ಜಿ ಸಂಖ್ಯೆ, ಅಧಿಸೂಚನೆ ಸಂಖ್ಯೆ ಮತ್ತು ಅರ್ಜಿ ಸಲ್ಲಿಸಿದ ದಿನಾಂಕಗಳ ಮಾಹಿತಿ ಪಡೆಯಬಹುದು.
4. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು 03 ದಿನಗಳ ಕಾಲಾವಕಾಶವನ್ನು ಮಾತ್ರ ನಿಗದಿಪಡಿಸಿರುವುದರಿಂದ ಕೊನೆಯ ದಿನಾಂಕದವರೆಗೂ ಕಾಯದೇ ತಕ್ಷಣವೇ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
5. ಸಹಾಯವಾಣಿ ಸಂಖ್ಯೆ: ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ತೊಂದರೆಗಳು ಎದುರಾದಲ್ಲಿ ಅಭ್ಯರ್ಥಿಗಳು ಈ ಕೆಳಕಂಡ HELP LINE ನಂಬರ್ ಅನ್ನು ಸಂಪರ್ಕಿಸಲು ಸೂಚಿಸಿದೆ.

   HELP LINE NO:080-30574957 / 30574901

**ಸಹಿ/-**

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ.